ಒಂದಿಷ್ಟು ಗಡ್ಡೆಗಳನ್ನು ತಿಂದರೆ ಮುಗಿಯಿತು ಊಟ!

ಮಧ್ಯಾಹ್ನದ ತನಕ ಗೌತಮರ ಪೂಜೆ, ಧ್ಯಾನ ಮುಗಿಯುವುದಿಲ್ಲ. ಅನಂತರ ಅಧ್ಯಯನ, ಶಿಷ್ಯರೊಟ್ಟಿಗೆ ಚರ್ಚೆ, ರಾತ್ರಿ ಹಸಿಹಾಲು ಕುಡಿದರೆ ತೀರಿತು!

ಮದುವೆಯಾದ ಹೊಸದರಲ್ಲಿ ಒಮ್ಮೆ ಹಾಲು ಕೆಂಪಗೆ ಕಾಯಿಸಿ, ಕೇಸರಿ, ತುಪ್ಪ, ಬೆರೆಸಿ ಲಜ್ಜೆ ತುಂಬಿಕೊಂಡ ಮುಖ, ಉದ್ವಿಗ್ನತೆಯಿಂದ ನಡುಗುವ ಕೈಗಳಿಂದ ಪತಿಯೆದುರಿಗಿಟ್ಟಿದ್ದಳು.

ಒಂದು ಗುಟುಕು ಕುಡಿದು ಮುಖಗಂಟಿಕ್ಕಿದ ಗೌತಮ.

'ಇಂಥದ್ದೆಲ್ಲಾ ಕುಡಿಯಬಾರದು ಅಹಲ್ಯಾ, ನೀನೂ ಕುಡಿಯದಿದ್ದರೆ ಒಳ್ಳೆಯದು, ಇನ್ನು ಮೇಲೆ ಹಾಲು ಕಾಯಿಸಬೇಡ. ಹಸಿ ಹಾಲೇ ಆರೋಗ್ಯಕ್ಕೆ ಒಳ್ಳೆಯದು.'

ತಣ್ಣಗೆ ಹೇಳಿದಾಗ ಅಹಲ್ಯೆಯ ಉತ್ಸಾಹ, ಸಡಗರ ಝುರ್ರನೆ ಇಳಿದಿತ್ತು. ವಾದ ಮಾಡುವಷ್ಟು ಧೈರ್ಯವಿರಲಿಲ್ಲ. ತಾನೂ ಅದನ್ನು ಅಭ್ಯಾಸ ಮಾಡಿಕೊಂಡು. ಬಿಡುವಿನ ವೇಳೆಯಲ್ಲಿ ತಾನೂ ಅಧ್ಯಯನದಲ್ಲಿ ತೊಡಗಿದರೂ, ಎಷ್ಟೆಂದು ಓದುವುದು?

ಕೈ ಗ್ರಂಥದ ಪುಟ ತಿರುವುತ್ತಿದ್ದರೆ, ಮನಸು ಬಯಕೆಯೆಡೆಗೆ ಜಗ್ಗುತ್ತಿದ್ದ ಪರಿ, ಅವಳಿಗೇ ಹೆದರಿಕೆ ಹುಟ್ಟಿಸುತ್ತಿತ್ತು!

ಅವಳೊಂದಿಗೆ ಹೆಚ್ಚು ಮಾತಾಡಲೂ ಗೌತಮಗೆ ಸಮಯವಿಲ್ಲ! ಎಲ್ಲವನ್ನು ಮುಚ್ಚಿಟ್ಟುಕೊಳ್ಳುತ್ತ, ಒಳಗೇ ಬೇಯುತ್ತ ಆ ಏಳೆಂಟು ವರ್ಷಗಳಲ್ಲಿ ನಿಗಿನಿಗಿಸುವ ಕೆಂಡವಾಗಿ ಬಿಟ್ಟಳು ಅಹಲ್ಯೆ!

ಆಗಲೇ ಅಲ್ಲವೇ ಅವನು ಸಿಕ್ಕಿದ್ದು?!

ಆ ದಿನ, ಮಾಗಿಯ ಚಳಿಯ ಒಂದು ಮುಂಜಾನೆ, ನದಿಯಲ್ಲಿ ಮಿಂದು, ಒದ್ದೆಬಟ್ಟೆಯಲ್ಲಿ ನಡುಗುತ್ತಾ, ನೀರು ತುಂಬಿದ ಕೊಡವನ್ನು ಸೊಂಟದ ಮೇಲಿಟ್ಟುಕೊಂಡು ಗಡಿಬಿಡಿಯಿಂದ ಹೆಜ್ಜೆ ಕಿತ್ತಿಡುತ್ತಿರುವಾಗ, ನದಿಯ ನೀರಿನಲ್ಲಿ ಅವರಿಬ್ಬರೂ ಕಂಡರು!

ಇನ್ನೂ ಪೂರ್ಣವಾಗಿ ಬೆಳಕಾಗಿರಲಿಲ್ಲದ, ನಸುಕತ್ತಲು–ಕತ್ತಲು–ಬೆಳಕು ಅರೆಬರೆ ಬೆರೆತಂತೆ, ಆ ಸ್ತ್ರೀ–ಪುರುಷರಿಬ್ಬರೂ ಮೈ ಮರೆತು ನಿಂತಿದ್ದರು! ಮನುಷ್ಯ ಮಾತ್ರದವರಿಗೆ ಅಸಾಮಾನ್ಯ ಎನಿಸುವ ರೂಪ, ವಸ್ತ್ರಗಳ ಅಸ್ತವ್ಯಸ್ತ ಸ್ವರೂಪ!... ಒಬ್ಬರಲ್ಲೊಬ್ಬರು ಒಂದಾಗಲು ಸ್ಪರ್ಧಿಸುವವರಂತೆ, ಬಿಗಿಯಾಗಿ ತಬ್ಬಿಕೊಂಡಿದ್ದ ಭಂಗಿ. ಅಹಲ್ಯೆಯ ಬಗೆಯನ್ನು ಕಲಕಿಬಿಟ್ಟಿತು.

ಸದ್ದಿಲ್ಲದೆ ಜಾರಿಕೊಂಡು ಹೋಗಿಬಿಡಬೇಕು ಎಂಬ ಪ್ರಯತ್ನ ವಿಫಲವಾಗಿ, ಪುರುಷನ ಕಣ್ಣಿಗೆ ಬಿದ್ದೇಬಿಟ್ಟಳು.

'ಯಾರು ನೀವು? ನಿಲ್ಲಿ! ನಿಲ್ಲಿ ಸ್ವಲ್ಪ!'

ಆತನ ಧ್ವನಿ ಕೇಳುತ್ತಿದ್ದಂತೆ, ಸತ್ತೇನೋ ಕೆಟ್ಟೆನೋ ಎಂದು, ಥರಥರ ನಡುಗುವ ಕೈ ಕಾಲು ಹೊತ್ತು, ಓಟ ಕಿತ್ತಳು ಆಶ್ರಮಕ್ಕೆ! ಆ ದಿನವೆಲ್ಲ ಮತ್ತೆ ನದಿಯೆಡೆಗೆ ಸುಳಿಯಲಿಲ್ಲ. ಆದರೆ ಮನಸ್ಸೆಲ್ಲ ಅತ್ತಲೇ ಇತ್ತು!

ಆ ಭಂಗಿ, ಆ ತನ್ಮಯತೆ, ಆ ಉದ್ವೇಗ... ತನ್ನ ಪತಿಯಲ್ಲೆಂದೂ ಇರಲಿಲ್ಲ!

ಥೂ ಥೂ... ಈ ರೀತಿ ಯೋಚಿಸುವುದು ತರವೇ ತನಗೆ? ಋಷಿಪತ್ನಿಗೆ? ಏನೀಗ, ಋಷಿಪತ್ನಿ ಹೆಂಗಸಲ್ಲವೇ? ಅವಳಿಗೆ ಆಸೆಗಳಿರಬಾರದೇ? ನೋಡುವ ಆಸೆಯಾದರೂ?... ಮನಸ್ಸು ಹತೋಟಿ ತಪ್ಪುತ್ತಿದೆಯೆನ್ನಿಸಿ, ಅಹಲ್ಯೆ ಒಳಗೊಳಗೇ ಗಾಬರಿಗೊಂಡಳು. ರಾತ್ರಿಯ ಕತ್ತಲಿನಲ್ಲಿ ಬಿಸಿಯುಸಿರಿನೊಂದಿಗೆ, ನೊಂದುಕೊಳ್ಳುತ್ತಾ ಮಲಗಿದವಳಿಗೆ ಅನಿಸಿತು....

'ಒಂದು ಮಗುವಾಗಿದ್ದರೆ ಹೀಗೆಲ್ಲಾ ಆಗಬೇಕಾಗಿರಲಿಲ್ಲ. ದೇವರು ಏಕೋ ಕೃಪೆ ಮಾಡಲಿಲ್ಲ' ನಿಟ್ಟುಸಿರಿಟ್ಟಳು.